ಕಥೆ

# ಬಯೋಮೆಟ್ರಿಕ್




**ಸದಾನಂದ ಸಿ.**

ಕಲೆ: ಮುರಳೀಧರ್ ರಾಥೋಡ್




2010bರಲ್ಲಿ ಆಧಾರ್ ಕಾರ್ಡ್ ಅನ್ನು ಭಾರತದಲ್ಲಿ ಅನುಷ್ಠಾನಗೊಳಿಸಲಾಯಿತು. ಈ ಮೂಲಕ ಸಂಗ್ರಹಗೊಳ್ಳುತ್ತಿದ್ದ ಯಥೇಚ್ಛವಾದ ಬಯೋಮೆಟ್ರಿಕ್ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ಮನುಷ್ಯರ ನಡವಳಿಕೆಯ ಮೇಲೆ ಸಂಶೋಧನೆಯನ್ನು ಕೈಗೊಳ್ಳುವಂತೆ 2015ರಲ್ಲಿ ಒಂದು ಪ್ರಯತ್ನ ನಡೆಯಿತು. ಇದೆಲ್ಲ ಗುಪ್ತವಾಗಿ ನಡೆಯಬೇಕಾದ ಕೆಲಸಗಳಾದ್ದರಿಂದ ಸಂಸ್ಥೆಯೊಂದನ್ನು ಜಾಗರೂಕತೆಯಿಂದ ಗುರುತಿಸಿ, ಆಗಬೇಕಾದ ಕೆಲಸಗಳ ಕುರಿತು ಆದೇಶ ನೀಡಲಾಯಿತು. ಹೀಗೆ ಆರಂಭವಾದ ಹೊಸ ವಿಭಾಗ ಬಯೋಮೆಟ್ರಿಕ್ ಸೈನ್ಸ್ ಮತ್ತು ಅದರ ಮುಖ್ಯಸ್ಥರು ಡಾ.ಅನುರಾಧ ವಸಿಷ್ಠ. ಕಂಪ್ಯೂಟರ್ ಸೈನ್ಸ್ ಹಾಗೂ ಸೈಕಾಲಜಿ ಎರಡು ಅಸಂಬಂಧಿತ ವಿಷಯಗಳಲ್ಲಿ ಉನ್ನತ ಪದವಿಯನ್ನು ಪಡೆದಿದ್ದ ಅವರು ಈ ವಿಭಾಗಕ್ಕಾಗಿಯೇ ಹೇಳಿ ಮಾಡಿಸಿದಂತೆ ಕಂಡುಬರುತ್ತಿತ್ತು. ಅವರ ಕೈ ಕೆಳಗೆ ಕೆಲಸ ಮಾಡುವ ನಾಲ್ಕು ಜನರ ತಂಡವನ್ನು ನಿಭಾಯಿಸುತ್ತಿದ್ದವ ರಾಘವ. ಆಧಾರ್ ಕಾರ್ಡಿನ ಡಿಜಿಟಲ್ ಮಾಧ್ಯಮದ ಮೂಲಕ ಸಂಗ್ರಹವಾಗುವ ಬೆರಳಚ್ಚುಗಳನ್ನು, ಐರಿಸ್ ಸ್ಕ್ಯಾನ್‌ಗಳನ್ನು ವಿಭಾಗಗಳಾಗಿ ವರ್ಗೀಕರಿಸಿ ಅವುಗಳ ರೂಪಗಳ ಆಧಾರದ ಮೇಲೆ ಮಾನವ ಸ್ವಭಾವಗಳಲ್ಲಿ ಸಾಮ್ಯತೆಗಳನ್ನು ಗುರುತಿಸುವುದು ಮತ್ತು ಅವುಗಳನ್ನು ಪ್ರೊಫೈಲ್‌ಗಳನ್ನಾಗಿ ವಿಂಗಡಿಸುವ ಕಾರ್ಯವನ್ನು ಬಯೋಮೆಟ್ರಿಕ್ ಸೈನ್ಸ್ ವಿಭಾಗ ನಿರ್ವಹಿಸುತ್ತದೆ. ಸಮಾಜದಲ್ಲಿ ಆಗುವ ಬದಲಾವಣೆಗಳಿಗೆ, ಯಾವ ಪ್ರೊಫೈಲ್ ಇರುವ ವ್ಯಕ್ತಿ ಹೇಗೆ ಪ್ರತಿಸ್ಪಂದಿಸುತ್ತಾನೆ ಎಂದು ಕಂಡುಹಿಡಿಯುವುದು ಈ ವಿಭಾಗದ ಮುಖ್ಯ ಸಂಶೋಧನೆಗಳಲ್ಲಿ ಒಂದು. ಜನ ಹೆಚ್ಚು ಹೆಚ್ಚು ಇಂಟರ್ನೆಟ್ ಹಾಗೂ ಮೊಬೈಲ್ ಫೋನುಗಳನ್ನು ಬಳಸಲು ಶುರು ಮಾಡಿದಾಗಿನಿಂದ, ಅವರುಗಳು ಬಳಸುವ ಇಂಟರ್ನೆಟ್ ಕಂಟೆಂಟ್ ಹಾಗೂ ಬ್ರೌಸ್ ಮಾಡುವ ಮಾಹಿತಿಗಳ ಆಧಾರದ ಮೇಲೆ ಅವರ